ಕವಿತೆ



**ಅಮರೇಶ ನುಗಡೋಣಿ**

ಕಲೆ: ಮುರಳೀಧರ್ ರಾಥೋಡ್

# ನಾನು, ನೀನು

ನಾನು ದೀಪದಡಿ ಕತ್ತಲಲಿ ಇರಲು ಬಯಸಿದೆ.
ನೀನು ದೀಪದಡಿ ಆಚಿನ ಬೆಳಕಿನಲಿ ಇರುತ್ತೇನೆಂದಿ.
ಮೂರು ತಾಸಿನ ಚುಕ್ಕಿ ಮೂಡುವ ಮುನ್ನ
ದೀಪದ ಎಣ್ಣೆ ತೀರಿ, ಬತ್ತಿಗೆ ಕುಡಿ ಬಂದು
ದೀಪ ಶಾಂತವಾಯಿತು.
ಗವ್ವೆನುವ ಕತ್ತಲಲಿ ನಾನು ನೀನು ಸಂದಿದ್ದೇವೆ
ಕತ್ತಲಲಿ ಮೂಡುವ ಮಹಾ ಬೆಳಕಿಗಾಗಿ ಹಂಬಲಿಸಿ

★

ನಾನು ನಿನಗೆ ಗಾಯಗೊಳಿಸಿದ್ದೇನೆಂದು ಮನಗಂಡೆ.
ನಾನೇ ಆ ಗಾಯ ನೋಡಿ ತಲ್ಲಣಿಸಿದೆ.
ನೀನೋ ಗಾಯಕ್ಕೆ ಸೊಪ್ಪಿನ ರಸ ಹಿಂಡಿಕೊಂಡಿ
ಮಾಯ್ದ ಗಾಯದ ಗುರುತು ನಗುತ್ತಿರುವಾಗ
ನಾನು ಜೀವಂತ ಹೆಣವಾಗುತ್ತಲೇ ಇದ್ದೇನೆ.

★

ನಿನಗೆ ಆಡಬಾರದ ಮಾತೊಂದನ್ನು
ನಾನಾಡಿಬಿಟ್ಟೆ.
ಗಾಳಿಗೆ
ನೀರಿಗೆ
ಬೆಳಕಿಗೆ
ಗಾಯವಾಯಿತೆಂಬ ಅನುಭವವಾಯಿತು.
ನೀನೋ ಚೈತ್ರವಾಗಿ ಬೆಳಗುತ್ತಿದ್ದಿ.

★

